HYDERABAD KARNATAKA REGION DEVELOPMENT BOARD
"Abhivruddi Bhavan" Aiwan-E-Shahi, Kalaburagi - 585102
Office: (08472) - 256767,239556,2236080, Fax:(08472) 227527
Email:hkabd@gmail.com, hkrdbklb@gmail.com
Website: hkrdb.kar.nic.in

ಸಂ:ಹೈಕಪ್ರಅಮಂ/ಯೋಶಾ/ಸಮಿತಿ/9/2018-19 / 1927 ದಿನಾಂಕ: 18.08.2018 / 20

# ಸುತ್ತೋಲೆ-4

**ವಿಷಯ:** ಹೈದ್ರಾಬಾದ್ ಕರ್ನಾಟಕ ಪ್ರದೇಶದ "ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಸಮಿತಿ" ಮತ್ತು "ತಾಲೂಕು ಮಟ್ಟದಲ್ಲಿ ಅನುಷ್ಠಾನ ಸಮಿತಿಗಳನ್ನು" ಸರ್ಕಾರದಿಂದ ರಚಿಸಲಾಗಿದ್ದು, ಅದರಂತೆ ಕಾರ್ಯಕಲಾಪ ನಡೆಸುವ ಕುರಿತು.

ಉಲ್ಲೇಖ:1.ಸರ್ಕಾರದ ಅಧಿಸೂಚನೆ ಸಂ: ಯೋ.ಇ/52/ಹೈಕವಿ/2015/ದಿನಾಂಕ:24.04.2015.
2.ಸರ್ಕಾರದ ಅಧಿಸೂಚನೆ ಸಂ: ಯೋ.ಇ/52/ಹೈಕವಿ/2015/ದಿನಾಂಕ:18.01.2016.

********

ಮೇಲ್ಕಂಡ ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯ ಪ್ರಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ. ಆದ್ದರಿಂದ ಸರ್ಕಾರದ ಅಧಿಸೂಚನೆಯಂತೆ ಆಯಾ ಜಿಲ್ಲಾ ಮಟ್ಟದ ಸಮಿತಿಯ ಸಭೆಗಳನ್ನು ಕಾಲ ಕಾಲಕ್ಕೆ ಜರುಗಿಸಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮ ಮತ್ತು ಕಾಮಗಾರಿಗಳನ್ನು ಸಭೆಯಲ್ಲಿ ಈ ಕೆಳಕಂಡ ಅಂಶಗಳ ಮೇಲೆ ಪರಿಶೀಲಿಸಿ ಕ್ರಮ ಕೈಕೊಳ್ಳುವುದು.

1. ಅನುಷ್ಠಾನ ಸಮಿತಿಗಳು ಕನಿಷ್ಠ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.
2. ಪ್ರತಿ ಮಾಹೇಯಲ್ಲಿ ಜರುಗಿಸಿದ ಸಭೆಯ ನಡುವಳಿಗಳನ್ನು, ನಿರ್ಣಯಗಳನ್ನು ಮತ್ತು ಮುಖ್ಯಾಂಶಗಳನ್ನು ಸಭೆ ಜರುಗಿದ 7ದಿವಸದ ಒಳಗಾಗಿ ಈ ಮಂಡಳಿಯ ಕಾರ್ಯಾಲಯಕ್ಕೆ ತಪ್ಪದೆ ಸಲ್ಲಿಸುವುದು.
3. ಅನುಷ್ಠಾನ ಸಮಿತಿಯು ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂತೆ ತನ್ನ ಸಭೆಯಲ್ಲಿನ ವ್ಯವಹಾರ ನಿರ್ವಹಣೆಯ ಸಂಬಂಧದ ಅಂತಹ ಕಾರ್ಯ ವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು.
4. ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲಿಸುವುದು ಮತ್ತು ಪ್ರಗತಿ ಸುಧಾರಣೆಗಾಗಿ ಸೂಕ್ತ ಮಾರ್ಗದರ್ಶನ ಸಲಹೆ ಸೂಚನೆಗಳನ್ನು ನೀಡುವುದು.
5. ಹೈದ್ರಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳಿಗೆ ನಿವೇಶನ ಮತ್ತು ಸ್ಥಳ ಲಭ್ಯತೆ ಇಲ್ಲದಿದ್ದಲ್ಲಿ ಸ್ಥಳ ಅವಕಾಶ ಕಲ್ಪಿಸುವುದು ಮತ್ತು ಯಾವುದೇ ಸಮಸ್ಯೆಗಳಿದ್ದರೆ ಸಮಿತಿಯ ಹಂತದಲ್ಲಿ ಪರಿಹಾರ ಒದಗಿಸುವುದು.
6. ಅನುಮೋದಿತ ಕಾಮಗಾರಿಗಳ ಟೆಂಡರ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದು.
7. ಟೆಂಡರ ಪ್ರಕಾರ ನಿಗದಿ ಪಡಿಸಿದ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ಅವುಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದು.

ಮುಂದುವರೆದಿದೆ.........

8. 3rd Party Inspection ಕಾಲಕಾಲಕ್ಕೆ ಮಾಡಿದ ತಪಾಸಣೆ ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ದೃಢ ಪಡಿಸಿ ಕೊಳ್ಳ ತಕ್ಕದ್ದು. ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ಲೋಪದೋಷ ಕಂಡುಬಂದಲ್ಲಿ ಸಂಬಂಧಿಸಿದ ಏಜನ್ಸಿಯವರ ಹಾಗೂ ಗುತ್ತಿಗೆದಾರರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದು.
9. ಪೂರ್ಣಗೊಂಡ ಕಾಮಗಾರಿಗಳ ಯಾದಿಯನ್ನು ಅನುಷ್ಠಾನಾಧಿಕಾರಿಗಳು ತಕ್ಷಣವೇ 3rd Party ಯವರಿಗೆ ವರದಿ ಕಳಿಸತಕ್ಕದ್ದು, 3rd Party ಯವರು ವರದಿ ಸ್ವೀಕರಿಸಿದ 10 ದಿವಸಗಳಲ್ಲಿ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸತಕ್ಕದ್ದು. ಈ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳುವುದು.

ಅದರಂತೆ ಉಲ್ಲೇಖ-(2)ರನ್ವಯ, ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿಗಳನ್ನು ಕೂಡಾ ಸರಕಾರವು ರಚಿಸಿರುತ್ತದೆ. ಈ ಕುರಿತು ಆಯಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರುಗಳು ಸಹ ಮೇಲಿನ ಅಂಶಗಳ ಪ್ರಕಾರ ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿಯ ಸಭೆ ಜರುಗಿಸುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲು ತಿಳಿಸಲಾಗಿದೆ.

ಲಗತ್ತು:- ಉಲ್ಲೇಖಿತ ಸರ್ಕಾರದ ಅಧಿಸೂಚನೆಗಳು

ತಮ್ಮ ವಿಶ್ವಾಸಿ,

8.18.

ಕಾರ್ಯದರ್ಶಿಗಳು,
ಹೈದ್ರಾಬಾದ್ ಕರ್ನಾಟಕ ಪ್ರದೇಶ
ಅಭಿವೃದ್ಧಿ ಮಂಡಳಿ ಕಲಬುರಗಿ.

ಪ್ರತಿಯನ್ನು:-

1. ಸರಕಾರದ ಪ್ರಧಾನ ಕಾರ್ಯದರ್ಶಿಗಳು ಯೋಜನಾ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಬಹುಮಹಡಿ ಕಟ್ಟಡಗಳು ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಜಿಲ್ಲಾಧಿಕಾರಿಗಳು ಕಲಬುರಗಿ/ಬೀದರ/ರಾಯಚೂರು/ಯಾದಗಿರಿ/ಕೊಪ್ಪಳ/ಬಳ್ಳಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಕಲಬುರಗಿ/ಬೀದರ/ಯಾದಗಿರಿ/ರಾಯಚೂರು/ಕೊಪ್ಪಳ ಹಾಗೂ ಬಳ್ಳಾರಿ ರವರ ಸೂಕ್ತ ಕ್ರಮಕ್ಕಾಗಿ ಹಾಗೂ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ್ ಇವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲು ಸೂಚಿಸಿದೆ.
4. ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯ 06 ಜಿಲ್ಲೆಗಳ ಅಪರ ಜಿಲ್ಲಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯ 06 ಜಿಲ್ಲೆಗಳ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ್ ಇವರಿಗೆ ಕಳುಹಿಸುತ್ತಾ ಈ ಪತ್ರದಲ್ಲಿ ತೋರಿಸಿದ ಅಂಶಗಳ ಮೇಲೆ ತಾಲೂಕು ಮಟ್ಟದ ಅನುಷ್ಠಾನ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.